# ಪರಂಪರೆ ಮತ್ತು ನವೋದಯ ಸಾಹಿತ್ಯ

**ಶ್ಯಾಮೂರ್ತಿ ಜಿ.**

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ವೀರಶೈವ ಮಹಾವಿದ್ಯಾಲಯ, ಬಳ್ಳಾರಿ.

DOI: https://doi.org/10.5281/zenodo.15795869

## ABSTRACT:

ಮಾನವನ ಸಂಸ್ಕೃತಿ ಮತ್ತು ನಾಗರಿಕತೆಗೆ ಸುದೀರ್ಘವಾದ ಪರಂಪರೆ ಇದೆ. ಪ್ರಾಣಿಯಂತಿದ್ದ ಅಂದಿನ ಮಾನವ ಜೀವನಕ್ಕೂ, ವೈವಿಧ್ಯಮಯವಾಗಿ ಜೀವನ ಕ್ರಮವನ್ನು ಕಂಡುಕೊಂಡ ಇಂದಿನ ಮಾನವನ ಜೀವನ ಕ್ರಮಕ್ಕೂ ಅಜಗಜಾಂತರದ ವ್ಯತ್ಯಾಸವನ್ನು ಕಾಣುತ್ತೇವೆ. ಈ ವೈಪರೀತ್ಯವನ್ನು ಗಮನಿಸಿದಾಗ, ಮಾನವನು ಅನೇಕ ಮಜಲುಗಳನ್ನು ದಾಟಿಕೊಂಡು ಬಂದಿದ್ದಾನೆ ಎಂಬುದು ಸರಿ. ಮಾನವನ ಈ ವಿಕಾಸದ ಚರಿತ್ರೆಯನ್ನು, ಬೌದ್ಧಿಕ ಮಜಲುಗಳನ್ನು ಸಾಹಿತ್ಯ ಪರಂಪರೆ ನಮಗೆ ತಿಳಿಸಿಕೊಡುತ್ತದೆ.

ಸಾಹಿತ್ಯ ರಚನೆ ಮಾನವನು ಸಾಧಿಸಿದ ಅದ್ಭುತಗಳಲ್ಲಿ ಒಂದು. ಮಾನವನ ಜೀವನ ಮತ್ತು ಸಾಹಿತ್ಯಗಳೆರಡೂ ಪರಸ್ಪರ ಪೂರಕ ಮತ್ತು ಪೋಷಕವಾದವುಗಳು. ಒಂದರಿಂದ ಒಂದು ಪ್ರಭಾವಿತವಾಗಿ ಬೆಳೆಯುತ್ತಾ ಹೋಗುತ್ತವೆ. ಸೂಕ್ಷ್ಮವಾಗಿ ಗಮನಿಸಿದಾಗ ಸಾಹಿತ್ಯ ರಚನೆ ಮಾನವನು ವಿಚಾರಶೀಲನಾದಾಗಿನಿಂದ ಒಂದಲ್ಲ ಒಂದು ವಿಧದಲ್ಲಿ, ಒಂದಲ್ಲ ಒಂದು ರೂಪದಲ್ಲಿ ರಚಿಸುತ್ತಾ, ರಕ್ಷಿಸುತ್ತಾ ಬಂದಿದ್ದಾನೆ. ಸಾಹಿತ್ಯವೆಂಬುದು ಮನುಷ್ಯನ ಸಮಸ್ತ ಅನುಭವಗಳ ಅಭಿವ್ಯಕ್ತಿಯಾಗಿರುವುದರಿಂದ ಸಹಜವಾಗಿ ಅದರಲ್ಲಿ ವೈವಿಧ್ಯತೆ ಮತ್ತು ಸಂಕೀರ್ಣತೆಗಳು ಉಂಟಾಗುತ್ತವೆ. ಸೃಜನಶೀಲ ಲೇಖಕರು ಸಾಹಿತ್ಯವನ್ನು ವಿವಿಧ ರೂಪಗಳಲ್ಲಿ ಸೃಷ್ಟಿಸುತ್ತಾ ಹೋಗುತ್ತಾರೆ. ಇದರ ಪರಿಣಾಮವಾಗಿಯೇ ಸಾಹಿತ್ಯ ಪರಂಪರೆಗಳು ವೈವಿಧ್ಯಮಯವಾಗಿ ಬೆಳೆದಿವೆ. ಇದಕ್ಕೆ ಕನ್ನಡವೂ ಹೊರತಲ್ಲ. ಪರಂಪರೆಯುದ್ದಕ್ಕೂ ಅನೇಕ ಪ್ರಕಾರಗಳಲ್ಲಿ, ಅಭಿವ್ಯಕ್ತಿ ಮತ್ತು ಆಶಯಗಳಿಗನುಗುಣವಾಗಿ ಬಹುಮುಖಿಯಾಗಿ ಸಾಗಿಬಂದಿದೆ. ಮೌಖಿಕ ಪರಂಪರೆಯಲ್ಲಿ ಕಂಠಸ್ಥವಾಗಿ, ಲಿಖಿತ ಪರಂಪರೆಯಲ್ಲಿ ಅಕ್ಷರ ರೂಪದಲ್ಲಿ – ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯ ಪರಂಪರೆಯ ಆವಸ್ಥೆಗಳಾಗಿ ಬೆಳೆದುಬಂದರೆ, ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಿಂದ ಪ್ರಾರಂಭಗೊಂಡು ವೈವಿಧ್ಯಮಯವಾಗಿ ಮುನ್ನಡೆಯುತ್ತಿರುವ ಸಾಹಿತ್ಯವೇ 'ಆಧುನಿಕ' ಅಥವಾ 'ಹೊಸಗನ್ನಡ ಸಾಹಿತ್ಯ' ಎಂದು ಪ್ರಚಲಿತವಾಗಿದೆ. ಈ ಕಾಲಘಟ್ಟದ ಸಾಹಿತ್ಯ ಪರಂಪರೆಯು ಕಾವ್ಯ, ಮಹಾಕಾವ್ಯ, ಕಥೆ, ಕಾದಂಬರಿ, ನಾಟಕ ಮುಂತಾದ ಹಲವಾರು ರೂಪಗಳಲ್ಲಿ ಸಮಕಾಲೀನ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಟ್ಟಿದೆ. ದೃಷ್ಟಿ ಧೋರಣೆಗಳಿಗೆ ಅನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂದು ನಾಲ್ಕು ಘಟ್ಟಗಳಾಗಿ ವರ್ಗೀಕರಿಸಲಾಗಿದೆ. ಕಾಲಮಾನಕ್ಕೆ ಅನುಗುಣವಾಗಿ ಸಾಹಿತ್ಯ ರಚನೆಯ

ಮನೋಧರ್ಮದಲ್ಲಿ ಆಗಿರುವ ಬದಲಾವಣೆಗಳನ್ನು ಈ ನಾಲ್ಕು ಘಟ್ಟಗಳ ಮೂಲಕ ಗುರುತಿಸಲಾಗಿದೆ. ಈ ಮುಖೇನ ಮೂಡಿಬಂದ ಸಾಹಿತ್ಯ ರೂಪಗಳು, ಸಮಕಾಲೀನ ಸ್ಥಿತಿಗತಿಗಳು, ಸಾಮಾಜಿಕ ಮೌಲ್ಯಗಳು ಸಾಹಿತ್ಯ ಪರಂಪರೆಯಲ್ಲಿ ಹೇಗೆ ಮೂಡಿಬಂದಿವೆ ಎನ್ನುವ ವಿಚಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, "ಪರಂಪರೆ ಮತ್ತು ನವೋದಯ ಸಾಹಿತ್ಯ" ವಿಷಯವನ್ನು ಆಯ್ಕೆ ಮಾಡಿಕೊಂಡು ಪ್ರಮುಖ ವಿಚಾರ ಪರಂಪರೆಗಳನ್ನು ಈ ಸಂಶೋಧನಾ ಲೇಖನದಲ್ಲಿ ಮಂಡಿಸಲಾಗಿದೆ. ಪ್ರಸ್ತುತ ಈ ಲೇಖನದ ಸಂಕ್ಷಿಪ್ತ ಸಾರಲೇಖ ಇದಾಗಿದೆ.

## KEYWORDS:

ಪರಂಪರೆ, ನವೋದಯ, ಪಾಶ್ಚಾತ್ಯ, ಸಾಹಿತ್ಯ ರೂಪಗಳು, ಸಾಂಸ್ಕೃತಿಕ ಭೂಮಿಕೆ, ವಸಾಹತುಶಾಹಿ, ರೊಮ್ಯಾಂಟಿಕ್, ಅರುಣೋದಯ.

ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಒಂದಕ್ಕೊಂದು ಪೂರಕವಾದವುಗಳು. ಮೊದಲು ಭಾಷೆ, ನಂತರ ಸಾಹಿತ್ಯ. ಈ ಎರಡು ರೂಪಗಳಿಂದ ಹೊರಹೊಮ್ಮಿದ್ದು ಸಂಸ್ಕೃತಿ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಈ ಮೂರೂ ಮಾದರಿಗಳಿಂದ ಕಾಲಾಂತರದಲ್ಲಿ ಬೆಳೆದು ಬಂದ ವಿಚಾರಧಾರೆಗಳ ಕ್ರಮವೇ ಪರಂಪರೆ. ಹಿಂದಿನ ಸನ್ನಿವೇಶ, ಅನೂಚಾನವಾಗಿ ಬಂದಿರುವ ಸಂಪ್ರದಾಯ, ಒಂದರ ನಂತರ ಮತ್ತೊಂದು, ಪರಿವಿಡಿ ಎಂದು ಪರಂಪರೆ ಎಂಬ ಪದಕ್ಕೆ ಸಮಾನ ಅರ್ಥಗಳನ್ನು ಅರ್ಥಕೋಶ ತಿಳಿಸುತ್ತದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆ ಸಮೃದ್ಧವಾದದ್ದು, ಅಷ್ಟೇ ವೈವಿಧ್ಯಮಯವಾದದ್ದು. ಸಾಹಿತ್ಯಕ್ಕೆ ಎರಡುವರೆ ಸಾವಿರ ವರ್ಷಗಳ ಇತಿಹಾಸವಿದ್ದರೆ; ಭಾಷೆಗೆ ಅದಕ್ಕಿಂತಲೂ ಪ್ರಾಚೀನ (ಕ್ರಿ.ಪೂ. ಎರಡನೇ ಶತಮಾನ?) ಇತಿಹಾಸವಿದೆ. ಸಂಸ್ಕೃತಿ ಮತ್ತು ಪರಂಪರೆಗಳಿಗೆ ಭಾಷೆಯಷ್ಟೇ ಸುದೀರ್ಘವಾದ ಇತಿಹಾಸವಿದೆ.

ಹಳಗನ್ನಡ ಸಾಹಿತ್ಯ ಪರಂಪರೆಯು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಪ್ರಭಾವ ಮತ್ತು ಪ್ರೇರಣೆಯಿಂದ ಬೆಳೆದು ಬಂದಂತೆ; ಹೊಸಗನ್ನಡ ಸಾಹಿತ್ಯವು ಪಾಶ್ಚಾತ್ಯ ಶಿಕ್ಷಣ ಮತ್ತು ಇಂಗ್ಲಿಷ್ ಸಾಹಿತ್ಯದ ಅಭ್ಯಾಸ ಕ್ರಮದಿಂದ ಹಾಗೂ ಬಂಗಾಳಿ, ಮರಾಠಿ ದೇಶೀ ಭಾಷೆಗಳ ಪ್ರೇರಣೆಯಿಂದಲೂ ವೈವಿಧ್ಯಮಯವಾಗಿ ಹೊಸಗನ್ನಡ ಸಾಹಿತ್ಯ ಪರಂಪರೆ ಶ್ರೀಮಂತಗೊಂಡಿತು. ಪ್ರಾಚೀನ ಕನ್ನಡ ಸಾಹಿತ್ಯವು ಚಂಪೂ ಮಾದರಿಯ ಪರಂಪರೆಯಿಂದ ಉಜ್ವಲಗೊಂಡರೆ; ನಡುಗನ್ನಡ ಸಾಹಿತ್ಯ ಪರಂಪರೆಯು ಸಂಕೀರ್ಣ ಸಾಹಿತ್ಯ ರೂಪಗಳಲ್ಲಿ ಬೆಳೆದು ಉಜ್ವಲಗೊಂಡಿತು. ಹೊಸಗನ್ನಡ ಸಾಹಿತ್ಯಕ್ಕೆ ಬಂದರೆ ಭಾವಗೀತೆ, ಸುನೀತ, ಸರಳ ರಗಳೆ, ಶೋಕಗೀತೆ, ಕಥನ ಕವನ, ಮಹಾಕಾವ್ಯ, ಕಾದಂಬರಿ, ಸಣ್ಣ ಕಥೆ, ನೀಳ್ಗತೆ, ನಾಟಕ, ಲಲಿತ

ಪ್ರಬಂಧ, ಪ್ರವಾಸ ಸಾಹಿತ್ಯ, ಆತ್ಮಚರಿತ್ರೆ, ಜೀವನಚರಿತ್ರೆ, ವಿಮರ್ಶೆ ಮುಂತಾದ ಸಾಹಿತ್ಯ ರೂಪಗಳು ವೈವಿಧ್ಯಮಯವಾಗಿ ರಚನೆಗೊಂಡು ಹೊಸಗನ್ನಡ ಸಾಹಿತ್ಯ ಪರಂಪರೆಯನ್ನು ಇನ್ನಷ್ಟು ಶ್ರೀಮಂತಗೊಳಿಸಿದವು. ಈ ಲೇಖನದಲ್ಲಿ ನವೋದಯ ಸಾಹಿತ್ಯದಲ್ಲಿ ಮೂಡಿಬಂದ ವಿಚಾರಧಾರೆಗಳನ್ನು ಪರಂಪರೆ ಹೆಸರಿನ ಮೂಲಕ ಪರಿಚಯಿಸಿಕೊಡಲಾಗಿದೆ.

ಹೊಸಗನ್ನಡ ಸಾಹಿತ್ಯ ಹೆದ್ದಾರಿಯಾಗಿ ಬೆಳೆದಿದ್ದು ಕ್ರಿ.ಶ. 1921ರ ಹೊತ್ತಿಗೆ ಬಿ.ಎಂ.ಶ್ರೀ. ಅವರ ಇಂಗ್ಲಿಷ್ ಗೀತೆಗಳು ಕನ್ನಡಕ್ಕೆ ಅನುವಾದಗೊಳ್ಳುವುದರ ಮೂಲಕ. ಹೊಸಗನ್ನಡ ಸಾಹಿತ್ಯದ ಆರಂಭ ಕಾಲ 19ನೇ ಶತಮಾನದ ಉತ್ತರಾರ್ಧ 20ನೇ ಶತಮಾನದ ಪ್ರಾರಂಭದ ದಶಕಗಳು ಪರಿವರ್ತನೆಯ ಘಟ್ಟವಾಗಿದೆ. ವಸ್ತು ಧೋರಣೆ, ಮನೋಧರ್ಮ, ಆಶೋತ್ತರಗಳಿಗೆ ಅನುಗುಣವಾಗಿ ಲೇಖಕರ ದೃಷ್ಟಿ, ಧೋರಣೆಯ ಭೂಮಿಕೆಯಲ್ಲಿ ವೈವಿಧ್ಯಮಯವಾಗಿ ಬೆಳೆಯಿತು. ಕಾವ್ಯ, ಮಹಾಕಾವ್ಯ, ಕಥೆ, ಕಾದಂಬರಿ, ನಾಟಕ ಮುಂತಾದ ಅನೇಕ ಸಾಹಿತ್ಯ ರೂಪಗಳು ಬಹು ಎತ್ತರಕ್ಕೆ ಈ ಕಾಲಾವಧಿಯಲ್ಲಿಯೇ ಬೆಳೆದು ನಿಂತವು. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಪಂಥಗಳಲ್ಲಿ ಆಯಾ ಕಾಲಘಟ್ಟದ ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಭೂಮಿಕೆಯಾಗಿ ಹೊಸಗನ್ನಡ ಸಾಹಿತ್ಯ ಪರಂಪರೆ ಬೆಳೆದುಬಂದಿದೆ.

ಹೊಸಗನ್ನಡ ಸಾಹಿತ್ಯ ಎಂದರೆ – ಹೊಸಗನ್ನಡ ಶಬ್ದದ ಅರ್ಥವೇ ಹೊಸ ಬಗೆಯ ಹುಟ್ಟು. ನವೀನವಾದ ಸಾಹಿತ್ಯ ಎಂದು ಅರ್ಥವಾಗುತ್ತದೆ. ಹಾಗೆ ನೋಡಿದರೆ ಹೊಸ ಸಾಹಿತ್ಯ, ಹಳೆಯ ಸಾಹಿತ್ಯ ಎಂಬುವುದಿಲ್ಲ. ಆಯಾ ಕಾಲದಲ್ಲಿ ಮೂಡಿಬಂದ ಸಾಹಿತ್ಯ ಹೊಸ ಸಾಹಿತ್ಯವೇ ಆಗಿರುತ್ತದೆ. ಕಾಲ ಸರಿದಂತೆಲ್ಲಾ ಅದು ಕಾಲದ ದೃಷ್ಟಿಯಿಂದ ಹಳೆಯದಾಗುತ್ತಾ ಹೋಗುತ್ತದೆ. ಹೇಮಚಂದ್ರನು ಹೇಳುವಂತೆ ಸಾಹಿತ್ಯ "ಪ್ರಜ್ಞಾನವನವೋಲ್ಲೇಖಶಾಲಿನಿ ಪ್ರತಿಭಾ ಮತಾ..."[1] ಅಂದರೆ ಸತತವಾಗಿ ಕಾಣುವ, ಕಟ್ಟುವ ಪ್ರಜ್ಞೆಯೇ ಪ್ರತಿಭೆ, ಅದು ಕವಿನಿರ್ಮಿತಿ. ಕಾವ್ಯವು ಯಾವಾಗಲೂ ನವನವೀನವಾಗಿ ಅವತರಿಸುತ್ತದೆ, ಹೊಸದನ್ನು ಹೇಳುತ್ತದೆ. ಇಲ್ಲವೇ ಶೋಧಿಸಿಕೊಡುತ್ತದೆ. ಅದು ಎಲ್ಲರನ್ನೂ ಆವರಿಸಿಕೊಳ್ಳಲು ಪ್ರಯತ್ನಿಸುತ್ತದೆ.

19ನೇ ಶತಮಾನದ ಉತ್ತರಾರ್ಧದಲ್ಲಿ ಪಡುವಣ ದಿಕ್ಕಿನಿಂದ ಬೀಸಿದ ಹೊಸ ಗಾಳಿ ಭಾರತೀಯರ ಜೀವನದಲ್ಲೂ ಬದಲಾವಣೆಯ ಪರ್ವವೇ ಆರಂಭವಾಯಿತು. ಕನ್ನಡ ಸಾಹಿತ್ಯಕ್ಕೆ ಹೊಸ ಬೆಳಕು, ಹೊಸ ಚಿಗುರು, ಹೊಸ ಲಯಗಳು, ಹೊಸ ರೂಪಗಳು ಧುಮ್ಮಿಕ್ಕಿ ಬಂದವು. ಸಮಾಜದ ಮೇಲೆ ಗಾಢವಾದ ಪರಿಣಾಮ ಮೂಡುವುದರ ಮುಖೇನ ಸಾಹಿತ್ಯದ ಮೇಲೂ ಗಂಭೀರ ಪರಿಣಾಮ ಬೀರಿದವು.

ಅಂದಿನ ವಸಾಹತುಶಾಹಿ ಸಂಸ್ಕೃತಿ ಪರಿಣಾಮದಿಂದ ಹೊಸ ಶಿಕ್ಷಣ ಪದ್ಧತಿ, ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಓದು, ಭಿನ್ನ ವಿಚಾರಧಾರೆಗಳನ್ನು ತಿಳಿದುಕೊಳ್ಳಲು ಅನುವು ಮಾಡಿಕೊಟ್ಟಿತು. ಇಂಗ್ಲಿಷಿನ ರೊಮ್ಯಾಂಟಿಕ್ ಸಾಹಿತ್ಯ ಭಾರತೀಯ ನೆಲದ ಮೇಲೆ ವಿಭಿನ್ನವಾಗಿ ಮೂಡಿಬಂದು ಅದು ಭಾರತೀಯ ಮತ್ತು ಕನ್ನಡ ಕವಿಗಳ ಮೇಲೆ ಪ್ರೇರಣೆ ಒದಗಿಸಿತು. ಸ್ವಾತಂತ್ರ್ಯ ಚಳುವಳಿಯ ಪ್ರಭಾವ, ದೇಶಪ್ರೇಮ, ನಾಡಪ್ರಜ್ಞೆ, ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆ ಮೇಲೆ ಪರಿಣಾಮ ಬೀರಿ ಹೊಸ ಸಾಹಿತ್ಯವೂ ಮೂಡಿಬಂದಿತು. ಪಾಶ್ಚಾತ್ಯ ಶಿಕ್ಷಣದ ಅರಿವು, ಭಾರತೀಯ ಅನುಭವ ಪರಂಪರೆ, ದಾರ್ಶನಿಕರ ವಿಚಾರಧಾರೆಗಳು ಹೊಸಗನ್ನಡ ಸಾಹಿತ್ಯ ಉದಯವಾಗಲು ಪ್ರೇರಣೆಯಾಗಿ ನವೋದಯ, ನವ್ಯ, ಪ್ರಗತಿಶೀಲ, ದಲಿತ–ಬಂಡಾಯ ಪಂಥಗಳಲ್ಲಿ ಬೆಳೆಯತೊಡಗಿತು.

**ನವೋದಯ ಸಾಹಿತ್ಯ:**

ಇದು ಹೊಸಗನ್ನಡ ಸಾಹಿತ್ಯದ ಮೊದಲ ಘಟ್ಟ. 20ನೇ ಶತಮಾನದ ಮೊದಲೆರಡು ದಶಕದಲ್ಲಿ ಪ್ರಾರಂಭಗೊಂಡ ನವೋದಯ ಸಾಹಿತ್ಯ ಕನ್ನಡ ಸಾಹಿತ್ಯ ಪರಂಪರೆಗೆ ಅನನ್ಯವಾದ ಕೊಡುಗೆ ನೀಡಿದೆ. ಈ ಸಾಹಿತ್ಯ ಪರಂಪರೆಗೆ ಈ ಸಂದರ್ಭಕ್ಕೆ (2025) ಒಂದು ಶತಮಾನ ಪೂರ್ಣಗೊಂಡಿದೆ. ಒಂದು ಶತಮಾನದಷ್ಟು ಹಿಂದಿನದ್ದಾದರೂ ಈ ಸಾಹಿತ್ಯ ಪರಂಪರೆಯಲ್ಲಿ ಮೂಡಿಬಂದ ಸಾಹಿತ್ಯ ಸಮಕಾಲೀನ ಸಂದರ್ಭಕ್ಕೂ ಹೆಚ್ಚು ಪರಿಣಾಮ ಬೀರುತ್ತದೆ. ಯಾವುದೇ ಸಾಹಿತ್ಯ ಯಾವುದೇ ಕಾಲಮಾನದಲ್ಲಿ ರಚನೆಗೊಂಡರೂ ಅದು ಸಮಕಾಲೀನ ಸಂದರ್ಭದಲ್ಲಿಯೂ, ಭವಿಷ್ಯತ್ತಿನಲ್ಲಿಯೂ ಹೆಚ್ಚಿನ ಪರಿಣಾಮ ಮತ್ತು ಪ್ರಭಾವವನ್ನುಂಟುಮಾಡಬೇಕು, ಅಂದರೆ ಕಾಲಾಂತರದಲ್ಲಿಯೂ ಜೀವಂತಿಕೆಯನ್ನು ಪಡೆಯಬೇಕು, ಅದು ಮೌಲಿಕ ಸಾಹಿತ್ಯವಾಗುತ್ತದೆ. ಹೀಗೆ ರಚಿಸುವ ಲೇಖಕರು ಪರಂಪರೆಯಲ್ಲಿ ಮನ್ನಣೆ ಪಡೆಯುತ್ತಾ ಹೋಗುತ್ತಾರೆ. ಯಾವುದೇ ಸಾಹಿತ್ಯ ಬರಹದ ಜೊತೆಗೆ ಮರೆಯಾಗಬಾರದು, ಹಾಗೆ ಆದರೆ ಬರಹ ಮತ್ತು ಲೇಖಕ ಮರೆಯಾದಂತೆ.

ನವೋದಯ ಸಾಹಿತ್ಯವು ಹೊಸಗನ್ನಡ ಸಾಹಿತ್ಯದ ಒಂದು ಪ್ರಕಾರ. ನವೋದಯ ಎನ್ನುವ ಈ ಕನ್ನಡ ಪದ ಇಂಗ್ಲಿಷಿನ 'ರೊಮ್ಯಾಂಟಿಕ್' ಎಂಬ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತದೆ. ಆದರೆ ಈ ಪದದ ಯಥಾರ್ಥ ರೂಪವಲ್ಲ. ಅದರ ಅನುಕರಣೆಯಾಗಲಿ, ಅನುಸರಣೆಯಾಗಲಿ ಅಲ್ಲ. ಕನ್ನಡ ನವೋದಯ ರೂಪಗೊಳ್ಳಲು ಪ್ರೇರಕವಾದ ಸಂಗತಿಗಳಲ್ಲಿ ರೊಮ್ಯಾಂಟಿಕ್ ಸಾಹಿತ್ಯ ಒಂದು ಎನ್ನುವುದು ಸರಿಯಷ್ಟೇ. ಈಗ ನೋಡುತ್ತಿರುವ ಅಥವಾ ಕರೆಯುತ್ತಿರುವ ನವೋದಯ ಸಾಹಿತ್ಯವನ್ನು ನವೋದಯದ ಕವಿಗಳಾರೂ ಹೀಗೆ ಕರೆದುಕೊಂಡಿಲ್ಲ. ನವ್ಯ

ಬರಹಗಾರರು ರೊಮ್ಯಾಂಟಿಕ್ ಕಾವ್ಯವನ್ನು ರಮ್ಯಾ ಕಾವ್ಯವೆಂದು ತಮಗಿಂತ ಹಿಂದೆ ರಚನೆಯಾದ ಸಾಹಿತ್ಯವನ್ನು ಗೇಲಿ ಮಾಡಲಾರಂಭಿಸಿದರು. ಆ ತರುವಾಯ ಈ ಸಾಹಿತ್ಯ ಪರಂಪರೆಯನ್ನು ಕುವೆಂಪು ಅವರು ನವೋದಯ ಎಂದು ಕರೆದರು. ನವೋದಯ (ಸಾಹಿತ್ಯ ) ಎನ್ನುವುದು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ; ಒಂದು ಕಾಲಮಾನದಲ್ಲಿ ಬಂದ ಸಾಹಿತ್ಯವಷ್ಟೇ ಅಲ್ಲ; ಅದು ಕಾಲಮಾನಕ್ಕೂ ಸಂಬಂಧಿಸಿದ್ದು ಕೂಡ. ಯಾವುದೇ ಕಾಲಮಾನದಲ್ಲಿ ಬರುವಂತಹ ಹೊಸ ವಿಚಾರಧಾರೆಗಳು ಕೂಡ ಆಗಿರುತ್ತದೆ. ಈ ದಿಸೆಯಲ್ಲಿ ಒಂದು ಕಾಲದಲ್ಲಿ ಬಂದ ಸಾಹಿತ್ಯವನ್ನು ನವೋದಯವೆಂದು ಕರಲ್ಪಟ್ಟಿತು; ಹಾಗೆ ಈಗಲೂ ಅದೇ ಮಾದರಿಯ ಅಥವಾ ಅದೇ ಬಗೆಯಲ್ಲಿ ಬರೆದಿರುವ ಸಾಹಿತ್ಯವನ್ನು ನಾವು ಏನೆಂದು ಕರೆಯಬೇಕು? ನವೋದಯ ಸಾಹಿತ್ಯವೆನ್ನಬೇಕೋ ಅಥವಾ ನವ ನವೋದಯವೆನ್ನಬೇಕೋ? ಕುವೆಂಪು ಅವರು ಸಾವಿರಾರು ವರ್ಷಗಳಿಂದ ಬೆಳೆದು ಬಂದ ಕನ್ನಡ ಸಾಹಿತ್ಯವನ್ನು ನಾಲ್ಕು ಪರಿವರ್ತನೆ ಘಟ್ಟಗಳನ್ನಾಗಿ ಗುರುತಿಸಬಹುದು ಎಂದು ಹೇಳುತ್ತಾರೆ. ಮೊದಲನೆಯದು – ಪ್ರಥಮ ನವೋದಯದಲ್ಲಿ 10ನೇ ಶತಮಾನದ ಜೈನಧರ್ಮ ರೂಪದಿಂದ ಆವಿರ್ಭೂತವಾದ ಸಾಹಿತ್ಯ. ಎರಡನೆಯದು – ದ್ವಿತೀಯ ನವೋದಯದಲ್ಲಿ 12ನೇ ಶತಮಾನದ ವೀರಶೈವ ಧರ್ಮ ರೂಪದಲ್ಲಿ ಮೈದುಂಬಿದ ಸಾಹಿತ್ಯ. ಮೂರನೆಯದ್ದು – ತೃತೀಯ ನವೋದಯದಲ್ಲಿ 13–14ನೇ ಶತಮಾನದಲ್ಲಿ ವೈಷ್ಣವ ಭಕ್ತಿ ರೂಪದಲ್ಲಿ ಪುನರುತ್ಥಾನವಾದ ಸಾಹಿತ್ಯ. ನಾಲ್ಕನೆಯದು – ಆಧುನಿಕ ಸಾಹಿತ್ಯ ರೂಪದಲ್ಲಿ ವಿಪುಲಗೊಂಡ ಸಾಹಿತ್ಯ.[2] ಕುವೆಂಪು ಅವರು ಆಯಾ ಕಾಲಮಾನದಲ್ಲಿ ಮೂಡಿಬಂದ ಸಾಹಿತ್ಯವನ್ನು ನವೋದಯವೆಂದೇ ಕರೆದಿರುವುದು ಸೂಕ್ತವಾಗಿದೆ.

**ಅರುಣೋದಯ ಅಥವಾ ನವೋದಯಪೂರ್ವ:**

ಅರುಣೋದಯ ಅಥವಾ ನವೋದಯಪೂರ್ವ ಕಾವ್ಯ – ವಸಾಹತುಶಾಹಿ ಕಾಲದಲ್ಲಿ ಕನ್ನಡವು ಹೊಸ ಸವಾಲುಗಳಿಗೆ ತೆರೆದುಕೊಳ್ಳುವ ಅನಿವಾರ್ಯತೆಯು ಎದುರಾಗಿತ್ತು. ಬ್ರಿಟಿಷರ ಆಕ್ರಮಣದ ನೀತಿಗಳು ಭಾರತೀಯ ಸಮಾಜದಲ್ಲಿ ಪಲ್ಲಟಗಳನ್ನು ಹುಟ್ಟುಹಾಕಿದವು. 19ನೇ ಶತಮಾನದ ಉತ್ತರಾರ್ಧದಲ್ಲಿ ಕನ್ನಡವು ಇಂಗ್ಲಿಷ್ ಮತ್ತು ದೇಸಿ ಭಾಷೆಗಳಿಗೆ ಮುಖಾಮುಖಿಯಾಗುತ್ತಲೇ ತನ್ನತನವನ್ನು ಸಾಧಿಸಬೇಕಾಗಿತ್ತು. 'ಒಳಹೊರಗಿನ ಸಾಹಿತ್ಯ ಸತ್ವವನ್ನು ಹೀರುತ್ತಲೇ ಹೊಸ ಮಾದರಿಯ ಕಾವ್ಯ ಸೃಷ್ಟಿಗೆ ನವೋದಯಪೂರ್ವ ಕವಿಗಳು ಕೈ ಹಾಕಿದರು.... ಅರುಣೋದಯ ಕಾವ್ಯಕ್ಕೆ ಯಾವುದೋ ಒಂದು ಸಾಹಿತ್ಯ ಚಳುವಳಿ ಪ್ರೇರಣೆಯಾಯಿತೆಂದು ಹೇಳಲಾಗದು. ಬ್ರಿಟಿಷ್ ಶಿಕ್ಷಣ ಪದ್ಧತಿ, ಇಂಗ್ಲಿಷ್ ಸಾಹಿತ್ಯದ ಓದು, ಸ್ವಾತಂತ್ರ್ಯ ನಾಡು–ನುಡಿಯ ಹೋರಾಟ, ಅನುವಾದ ಸಾಹಿತ್ಯ, ಬಂಗಾಳದಲ್ಲಿ

ನಡೆದ ಸಾಮಾಜಿಕ ಸುಧಾರಣೆ, ಹೊಸ ಧಾರ್ಮಿಕ ಪಂಥಗಳ ಉದಯ, ಐರೋಪ್ಯ ರಾಷ್ಟ್ರಗಳಲ್ಲಿನ ಪುನರುಜ್ಜೀವನ ಚಳುವಳಿ, ಮುದ್ರಣ ಯಂತ್ರ, ರೈಲು ಸಾರಿಗೆ ವಿಕಾಸ, ಸಾಹಿತ್ಯ ಪತ್ರಿಕೆಗಳು, ಕ್ರೈಸ್ತ ಮಿಷನರಿಗಳ ಸೇವೆ, ಗೆಳೆಯರ ಬಳಗ, ದಾಸ ಮತ್ತು ತತ್ವಪದಗಳ ಪ್ರಭಾವ, ಕಂಪನಿ ನಾಟಕ, ಹಳಗನ್ನಡ-ಜನಪದ ಕಾವ್ಯಗಳ ಪ್ರೇರಣೆ, ಕನ್ನಡ ಮಾಧ್ಯಮದ ಶಾಲೆಗಳ ಆರಂಭ, ಓದುಗ ಹೊಸ ವರ್ಗದ ಸೃಷ್ಟಿ – ಮೊದಲಾದವುಗಳ ಒತ್ತಾಸೆಯಿಂದ ನವೋದಯ ಪೂರ್ವ ಕಾವ್ಯವು ಅಂಕುರಗೊಂಡಿತು' ಎನ್ನುವುದು ಸರಿ.

ಮಕ್ಕಳ ಗೀತೆಗಳ ರಚನೆ, ಇಂಗ್ಲಿಷ್ ಮತ್ತು ಸಂಸ್ಕೃತದಿಂದ ಕಾವ್ಯಾನುವಾದ, ಪುರಾಣ, ಚರಿತ್ರೆಗಿಂತ ಭಿನ್ನವಾದ ಹೊಸ ಕಾವ್ಯ ವಸ್ತುವಿನೆಡೆಗೆ ಆಸಕ್ತಿ, ನೀತಿ ಪ್ರಧಾನವಾದ ಗೀತೆಗಳಿಗೆ ಆದ್ಯತೆ, ನಾಡು-ನುಡಿಯ ಕುರಿತು ಅಭಿಮಾನ, ಬಂಧುರ ರಹಿತವಾದ ಕಾವ್ಯಶೈಲಿ, ಬ್ರಿಟಿಷ್ ಅಧಿಕಾರಿಗಳಿಂದ ಕನ್ನಡ ಶಾಲಾ ಪಠ್ಯವಾಗಿ ಸಂಕಲನಗಳ ರಚನೆ, ಕಾವ್ಯ ಭಾಷೆಯಲ್ಲಿ ಹೊಸತನಕ್ಕೆ ಯತ್ನ, ಕಥನ ಕವನದಂತಹ ಹೊಸ ಕಾವ್ಯ ಪ್ರಕಾರದ ಉದಯ, ಜನಪದ ಗೀತೆಗಳ ಲಯಗಳು."[3] ಇವೆಲ್ಲ ಅಂಶಗಳು ನವೋದಯಪೂರ್ವ ಕಾವ್ಯ ಪರಂಪರೆಯ ವೈಶಿಷ್ಟ್ಯಗಳಾಗಿವೆ.

"ಎರಡು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಸೌರಭವನ್ನು, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಸಾಹಿತ್ಯ ಚರಿತ್ರೆ ಎಂದು ವಿಭಾಗಿಸಲಾಗುತ್ತದೆ. ಹಳಗನ್ನಡವು ಕ್ರಿ.ಶ. 10ನೇ ಶತಮಾನದಿಂದ 12ನೇ ಶತಮಾನದವರೆಗೆ, ನಡುಗನ್ನಡ 12ನೇ ಶತಮಾನದಿಂದ 19ನೇ ಶತಮಾನದವರೆಗೆ, ಹೊಸಗನ್ನಡವನ್ನು ಹತ್ತೊಂಬತ್ತನೇ ಶತಮಾನದಿಂದ ವರ್ತಮಾನದವರೆಗೆ ಗುರುತಿಸಲಾಗುತ್ತದೆ. ಆಧುನಿಕ/ಹೊಸಗನ್ನಡದ ಮೊದಲ ಹೆಜ್ಜೆಯೆಂದರೆ ನವೋದಯ ಸಾಹಿತ್ಯ. ಪಶ್ಚಿಮದ ಆಧುನಿಕತೆ, ಸ್ಥಳೀಯ ಪರಂಪರೆಯ ಸತ್ವಗಳನ್ನು ಬಳಸಿಕೊಂಡು ಹೊಸಗನ್ನಡದ ಆರಂಭದ ಕವಿಗಳು ನವೋದಯ ಸಾಹಿತ್ಯದ ರೂಪರೇಷೆ, ಪ್ರೇರಣೆ-ಧೋರಣೆಗಳನ್ನು ರೂಪಿಸಿಕೊಂಡರು. ಅವರಿಗೆ ಹೊಸ ಕಾವ್ಯ ನಿರ್ಮಿತಿಯ ಸವಾಲು, ಹೊಸ ಓದುವ ವರ್ಗ, ಸಂವಹನ ಸಾಧ್ಯವುಳ್ಳ ಭಾಷೆ, ಹೊಸ ಸಾಹಿತ್ಯ ಪ್ರಕಾರ – ಹೀಗೆ ಹಲವು ಬಗೆಯ ಸವಾಲುಗಳನ್ನು ಸ್ವೀಕರಿಸಿಕೊಂಡು ಸಾಹಿತ್ಯ ಸೃಷ್ಟಿಸಿದರು. ಹಿಂದಿನ ಸಾಹಿತ್ಯ ಪರಂಪರೆಯನ್ನು ಟೀಕಿಸುವ, ಅಲಕ್ಷಿಸುವ ಗೋಜಿಗೆ ಹೋಗದೆ, ಪರಂಪರಾಗತ ಸಾಹಿತ್ಯದ ಮಿತಿಗಳಿಗಿಂತ, ಅದರಲ್ಲಿನ ಆದರ್ಶಗಳನ್ನು ಬಳಸಿಕೊಳ್ಳುವುದರ ಕಡೆಗೆ ನವೋದಯ ಪೂರ್ವ ಕವಿಗಳು ಹೆಚ್ಚು ಗಮನ ಹರಿಸಿ ಸಾಹಿತ್ಯ ಪರಂಪರೆಯನ್ನು ಬೆಳೆಸಿದರು."[4]

**ನವೋದಯ ಸಾಹಿತ್ಯದ ರೂಪಗಳು:**

ನವೋದಯದ ಸಾಹಿತ್ಯ ಪ್ರಕಾರಗಳ ಕುರಿತು ಹೇಳುವುದಾದರೆ, ಹಳಗನ್ನಡ

ಮತ್ತು ನಡುಗನ್ನಡ ಸಾಹಿತ್ಯ ರೂಪಗಳಿಗೆ ಬದಲಾಗಿ, ಸಮಕಾಲೀನ ಧೋರಣೆಗೆ ಅನುಗುಣವಾಗಿ ವಿಭಿನ್ನವಾದ ಹೊಸ ಪ್ರಕಾರಗಳನ್ನು ಸೃಷ್ಟಿಸಿಕೊಳ್ಳುವ ಜರೂರಿ ನವೋದಯ ಕವಿಗಳಿಗಿತ್ತು. ಈ ಸವಾಲುಗಳನ್ನು ಅರಿತ ಕವಿಗಳು ಪುರಾಣ, ಇತಿಹಾಸ, ರಾಮಾಯಣ, ಮಹಾಭಾರತಗಳ ವಸ್ತುಗಳ ಬದಲಾಗಿ ಮಾರ್ಗಪ್ರಧಾನ ಹಳಗನ್ನಡ ಕಾವ್ಯ ರಚನೆಗಳನ್ನು ಬಿಟ್ಟು, ನಡುಗನ್ನಡದ ವಿವಿಧ ದೇಶೀಯ ಛಂದೋರೂಪಗಳಿಗೆ ಬದಲಾಗಿ ಹೊಸ ಬಗೆಯ ಸಾಹಿತ್ಯಕ್ಕೆ ಹಂಬಲಿಸುತ್ತಿತ್ತು. ಇದೇ ಸಂದರ್ಭಕ್ಕೆ ಹೊಸ ಬರವಣಿಗೆಗೆ ಬೇಕಾದ ಪ್ರೇರಣೆಯನ್ನು ಇಂಗ್ಲಿಷ್ ಶಿಕ್ಷಣ ಹಾಗೂ ಸಾಹಿತ್ಯದ ಅಭ್ಯಾಸವು ಒದಗಿಸಿತು. ಅನುವಾದದ ಮೂಲಕ ರೂಪಾಂತರ, ಭಾವಾನುವಾದ ಮೊದಲಾದ ಮಾರ್ಗದಿಂದ ಭಾವಗೀತೆ, ಸುನೀತ, ಸರಳ ರಗಳೆ, ಕಥನಕವನ, ಮಹಾಕಾವ್ಯ, ಸಣ್ಣ ಕಥೆ, ಕಾದಂಬರಿ, ನಾಟಕ, ನೀಳ್ಗತೆ, ಶೋಕಗೀತೆ, ಲಲಿತ ಪ್ರಬಂಧ, ಪ್ರವಾಸಸಾಹಿತ್ಯ, ಆತ್ಮಚರಿತ್ರೆ, ಜೀವನಚರಿತ್ರೆ, ವಿಮರ್ಶೆ ಮೊದಲಾದ ಭಿನ್ನ ಸಾಹಿತ್ಯ ರೂಪಗಳನ್ನು ನವೋದಯ ಕವಿಗಳು ರೂಪಿಸಿಕೊಂಡು, ಸಮಕಾಲೀನ ಆಶೋತ್ತರಗಳಿಗೆ ಅನುಗುಣವಾಗಿ ವೈವಿಧ್ಯಮಯವಾದ ಸಾಹಿತ್ಯವನ್ನು ನೀಡಿ ಈ ಸಾಹಿತ್ಯ ಪರಂಪರೆಯನ್ನು ಉನ್ನತೀಕರಿಸಿದರು.

**ನವೋದಯ ಸಾಹಿತ್ಯ ಮೌಲ್ಯಗಳು:**

ಆನಂದ ನೀಡುವುದಷ್ಟೇ ಸಾಹಿತ್ಯವಲ್ಲ, ಅದರ ಜೊತೆಗೆ ಸಮಾಜದ ಓರೆ ಕೋರೆಗಳನ್ನು ಸರಿಪಡಿಸಿ ಮೌಲ್ಯಗಳನ್ನು ಎತ್ತಿಹಿಡಿಯುವುದಾಗಿರುತ್ತದೆ. ಜೀವಪರ, ಮಾನವಪರವಾದ, ಮಾನವತ್ವವನ್ನು ಪ್ರತಿಬಿಂಬಿಸುವ ಸಂಗತಿಗಳಾಗಿರಬಹುದು; ಪ್ರೀತಿ, ಕರುಣೆ, ಅನುಕಂಪ, ಧೈರ್ಯ, ಪರೋಪಕಾರ, ಸತ್ಯ, ಅಹಿಂಸೆ, ಸೋದರತ್ವ, ಅರಿತು ಬಾಳುವುದು, ಸೌಹಾರ್ದತೆ ಮತ್ತು ಅದರಾಚೆಗಿನ ಯಾವುದೇ ಆದರ್ಶಗಳನ್ನು ಜೀವನ ಮೌಲ್ಯಗಳೆಂದು ಸ್ಥೂಲವಾಗಿ ಕರೆಯುತ್ತೇವೆ. ಒಂದು ಕಾಲದ ಪಾರಂಪರಿಕ ಜೀವನಮೌಲ್ಯಗಳು ಮತ್ತೊಂದು ಕಾಲಕ್ಕೆ ಹಾಗೆಯೇ ಇರುತ್ತವೆ ಎಂದು ಹೇಳಲಾಗದು. ಅವು ಪರಂಪರೆಯಲ್ಲಿ ಮೌಲ್ಯಗಳಾಗಿ ಸಾಗಬಹುದು, ಸವಕಳಿಯಾಗಬಹುದು, ಅಪಮೌಲ್ಯಗಳಾಗಬಹುದು, ಸ್ಥಗಿತವಾಗಬಹುದು ಅಥವಾ ಇನ್ನೂ ಹೆಚ್ಚು ಮೌಲ್ಯಗಳಾಗಿ ಕಂಡುಬರಬಹುದು, ಹೊಸ ಮೌಲ್ಯಗಳಿಗೆ ಕಾರಣವಾಗಬಹುದು. ಏಕೆಂದರೆ ಸಮಾಜ ಚಲನಶೀಲವಾದುದ್ದು, ಬದಲಾಗುತ್ತಿರುತ್ತದೆ. ಹಾಗೆಯೇ ಸಮಾಜದ ಪ್ರತಿಬಿಂಬವಾದ ಸಾಹಿತ್ಯವು ಸೃಜನಶೀಲವಾದುದ್ದು. ಕಾಲಮಾನದ ತುಡಿತಗಳಿಗೆ ಒಳಗಾಗಿ ಸಮಾಜ ಬದಲಾದಂತೆ, ಸಮಾಜದ ಪ್ರತಿಬಿಂಬವಾದ ಸಾಹಿತ್ಯವೂ ಕೂಡ ಬದಲಾಗುತ್ತದೆ. ಯಾವುದೇ ಒಂದು ಕಾಲಮಾನದ ಕೃತಿಯಲ್ಲಿ ಎಲ್ಲಾ ಕಾಲಮಾನಕ್ಕೂ ಸಲ್ಲುವ ಮೌಲ್ಯಗಳಿರುತ್ತವೆಂದು ಹೇಳಲಾಗದು; ಇರಬಹುದು ಇಲ್ಲದೇ ಇರಬಹುದು. ಒಂದು ಕಾಲಘಟ್ಟದ ಸಾಹಿತ್ಯ ಕೃತಿಗಳಲ್ಲಿ ಇಂದಿನ ಮನುಷ್ಯತ್ವದ

ಹುಡುಕಾಟವಾಗಲಿ, ಜೀವನದ ಮೌಲ್ಯಗಳಾಗಲಿ, ಆದರ್ಶಗಳಾಗಲಿ ಇಲ್ಲವೆಂದು ಕೃತಿಯನ್ನು ದೂರುವುದಾಗಲಿ, ಲೇಖಕನನ್ನು ಜರಿಯುವುದಾಗಲಿ ಸರಿಯಲ್ಲ.

ನವೋದಯ ಸಾಹಿತ್ಯ ಪರಂಪರೆಯಲ್ಲಿ ಜೀವಪರವಾದ, ಮಾನವಪರವಾದ ಜೀವನದ ಮೌಲ್ಯಗಳು ದೊರೆಯುತ್ತವೆ. ಹಾಗೆಯೇ ಜೀವ ವಿರೋಧಿಯಾದ, ಸ್ಥಗಿತವಾದ ಮೌಲ್ಯಗಳು ಕಂಡುಬರುತ್ತವೆ. ಹೊಸ ಮೌಲ್ಯಗಳೂ ಹುಟ್ಟಿಕೊಂಡಿವೆ. "....ದೇಶೀಯವಾಗಿ ಮೂಡಿ ಬಂದ ಅನೇಕ ಚರಿತ್ರೆ ಕಾವ್ಯ ಕೃತಿಗಳು (ಪುರಾಣ ಕಾವ್ಯಗಳು) ತಮ್ಮೊಡಲೊಳಗೆ ಗರ್ಭೀಕರಿಸಿಕೊಂಡಿದ್ದ ನೀತಿ ಬೋಧಕವಾದ ಜೀವ ಪರವಾದ ಸಂಗತಿಗಳು, ಕಾಲ್ಪನಿಕ ರಮ್ಯಕತೆಗಳು, ಪ್ರಾದೇಶಿಕ ಪರಿಸರದ ವಿಹಂಗಮ ನೋಟ, ಆ ನೋಟದೊಳಗಿನ ಜೀವನಾನುಭವ, ಜಡ-ಚೇತನಗಳೆರಡರ ಸಂವಾದಗಳು ಆ ಕಾಲದ ಎಲ್ಲಾ ಸೃಜನಶೀಲ ಬರಹಗಾರರ ಮೇಲೆ ಪ್ರಭಾವ ಬೀರಿದ ಕಾರಣ ಮನುಷ್ಯತ್ವವೆಂಬುದೇ ನವೋದಯ ಕಾಲದ ಪ್ರಮುಖ ಜೀವನಮೌಲ್ಯವಾಯಿತು. ನವೋದಯ ಸಾಹಿತ್ಯ ಹುಟ್ಟಿದ ಸಂದರ್ಭ, ಪ್ರೇರಣೆ, ಪ್ರಯೋಗಗಳನ್ನು ಅವಲೋಕಿಸಿ ನಾವು ಅಲ್ಲಿನ ಮನುಷ್ಯ - ಮನುಷ್ಯತ್ವದ ಮೌಲ್ಯ ಗುರುತಿಸಬೇಕು".[5] ಮನುಷ್ಯತ್ವವೆಂಬುದೇ ನವೋದಯ ಕಾಲದ ಪ್ರಮುಖ ಜೀವನಮೌಲ್ಯವಾಯಿತು ಎಂಬುವುದು ಸರಿ. ಆದರೆ ನವೋದಯ ಸಾಹಿತ್ಯ ಹುಟ್ಟಿದ ಸಂದರ್ಭ, ಪ್ರೇರಣೆ, ಪ್ರಯೋಗಗಳನ್ನು ಅವಲೋಕಿಸಿ ನಾವು ಅಲ್ಲಿನ ಮನುಷ್ಯ - ಮನುಷ್ಯತ್ವದ ಮೌಲ್ಯ ಗುರುತಿಸಬೇಕಾಗುತ್ತದೆ, ಹಾಗೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಜೀವ ವಿರೋಧಿಯಾದ, ಸ್ಥಗಿತವಾದ ಮೌಲ್ಯಗಳು ಕಂಡುಬರುತ್ತವೆ ಎಂಬುವು ಅಷ್ಟೇ ಸರಿ.

"ತೀ.ನಂ.ಶ್ರೀ. (ಒಲುಮೆ, ಬಿಡಿಮುತ್ತು), ಕಡಂಗೋಡ್ಲು ಶಂಕರಭಟ್ಟ (ಘೋಷಯಾತ್ರೆ, ಗಾಂಧಿ ಸಂದೇಶ, ವಸ್ತ್ರಾಪಹರಣ, ನಲ್ಮೆ, ಪತ್ರಪುಷ್ಪ), ವಿ. ಸೀತಾರಾಮಯ್ಯ (ದೀಪಗಳು, ಗೀತಗಳು, ನೆಳಲು-ಬೆಳಕು, ದ್ರಾಕ್ಷಿ-ದಾಳಿಂಬೆ, ಹೆಜ್ಜೆ ಪಾಡು, ಅರಳು-ಬರಳು), ಬೆಟಗೇರಿ ಕೃಷ್ಣಶರ್ಮ (ರಾಷ್ಟ್ರೀಯ ಪದ್ಯಾವಳಿ, ಗಾಂಧೀ ಗೀತ ಪುಸ್ತಕ, ರಮೆಯುಮೆಯರ ಸಂವಾದ, ಮುದ್ದನ ಮಾತು, ಅರುಣೋದಯ, ವಿರಹಿಣಿ, ಒಡನಾಡಿ, ಕಾರಹುಣ್ಣಿಮೆ, ನಲ್ವಾಡುಗಳು, ಉತ್ಸಾಹ ಗಾಥಾ, ಸೀಮೆಯ ಕಲ್ಲು, ಬೆಳುವಲದ ಸುಗ್ಗಿ (ಸಮಗ್ರ), ದಿನಕರ ದೇಸಾಯಿ (ಹೂ ಗೊಂಚಲು, ತರುಣರ ದಸರೆ, ಕಡಲ ಕನ್ನಡ, ದಾಸಾಳ ಮತ್ತು ಮಕ್ಕಳ ಗೀತೆಗಳು), ಸಿದ್ಧಯ್ಯ ಪುರಾಣಿಕ (ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು, ಕಲ್ಲೋಲ ಮಾಲೆ, ಚರಗ, ಹಾಲ್ದೆನೆ, ಮರುಳ ಸಿದ್ಧನ ಕಂತೆ), ಡಿ.ಎಸ್ ಕರ್ಕಿ (ನಕ್ಷತ್ರಗಾನ, ಭಾವತೀರ್ಥ, ಗೀತಗೌರವ, ನಮನ, ಕರ್ಕಿ ಕಣಗಲ) - ಈ ಮೊದಲಾದ ನವೋದಯ ಕವಿಗಳು ನವೋದಯದ ಕಾವ್ಯ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಅವರ ಕವಿತೆಗಳು ಜೀವಮುಖಿಯಾದ ಭಾವನೆಗಳನ್ನು ಹೆಚ್ಚಾಗಿ ವ್ಯಕ್ತಪಡಿಸುತ್ತವೆ. ಅದರ

ಜೊತೆಗೆ ಮಾನವತೆಯ ಮೌಲ್ಯವನ್ನು ಸಾರುವ ಆಶಯದೊಂದಿಗೆ ಹುಟ್ಟಿಕೊಂಡಂತವು. ನಾಡು-ನುಡಿ, ದಾಂಪತ್ಯ ಪ್ರೇಮ, ಜೀವ ಚೈತನ್ಯ, ಆಶಾಭಾವನೆ, ಸಮಾಜಮುಖಿ ಅನುಭಾವ - ಇವೇ ವಿಷಯ ವಸ್ತುಗಳು ಅವರ ಕಾವ್ಯದಲ್ಲಿ ಪ್ರಮುಖವಾಗಿ ಕಾಣುತ್ತೇವೆ."[6] ಇವು ಕೆಲವು ಉದಾಹರಣೆಗಳಷ್ಟೇ, ಹೀಗೆ ಅನೇಕ ಕವಿಗಳ ಬರಹಗಳಲ್ಲಿ ಜೀವನ ಮೌಲ್ಯಗಳನ್ನು ಕಾಣಬಹುದು.

ಬಾಲ್ಯ ವಿವಾಹ, ವಿಧವಾ ವಿವಾಹ, ಸತಿ ಸಹಗಮನ ಪದ್ಧತಿ, ಮೂಢನಂಬಿಕೆಗಳು ದೂರವಾಗಿ ಜೀವಪರವಾದ ವಿಚಾರಧಾರೆಗಳು ಮುನ್ನೆಲೆಗೆ ಬಂದವು, ಜೀವನದ ಮೌಲ್ಯಗಳೆಂದರೆ ಧಾರ್ಮಿಕ ಮೌಲ್ಯಗಳು ಎನ್ನುವಂತ ಧೋರಣೆಗಳು ನವೋದಯ ಕಾಲದ ಕೇಂದ್ರ ಬಿಂದುವಾಗಿ ಧಾರ್ಮಿಕ ನಂಬಿಕೆಗಳು ಜೀವನ ಮೌಲ್ಯಗಳನ್ನು ಹೆಚ್ಚಿಸಿದವು, ವೈಚಾರಿಕ ವಿಚಾರಧಾರೆಗಳು ಪ್ರಚಲಿತವಾದವು, ದೇಶಾಭಿಮಾನ ಮತ್ತು ಸ್ವಾತಂತ್ರ್ಯದ ಮನೋಭಾವ ಎಲ್ಲರಲ್ಲೂ ಜಾಗೃತಿ ಮೂಡಿಸಿತು, ಬದುಕನ್ನು ಆದರ್ಶ ನೆಲೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಯಿತು, ಸಮಕಾಲೀನ ತಾತ್ವಿಕ ದರ್ಶನವನ್ನು ಲೇಖಕರು ಪ್ರತಿಪಾದಿಸಲು ಪ್ರಯತ್ನಿಸಿದರು.

ಪ್ರಕೃತಿ, ದೇವರು, ವ್ಯಕ್ತಿ, ಮನಸ್ಸು, ಧ್ಯಾನ, ಆತ್ಮ, ಸಮಾಜ, ಪರಂಪರೆ ಸೇರಿದಂತೆ ಯಾವುದೇ ವಿಷಯ ವಸ್ತುವನ್ನು ನೋಡುವ ದೃಷ್ಟಿಕೋನ ಭಿನ್ನವಾಗಿ ಹೊಸ ಹೊಸ ವಿಚಾರಧಾರೆಗಳು ಮೂಡಿ ಬಂದವು. ವಸ್ತುನಿಷ್ಠತೆಗಿಂತ ವ್ಯಕ್ತಿನಿಷ್ಠ ಭಾವನೆಗಳು ಪ್ರಧಾನವಾದವು. ಹಳೆಯ ಸಾಂಪ್ರದಾಯಿಕ ವಿಚಾರಗಳನ್ನು ಪ್ರಶ್ನೆಗೆ ಒಳಪಡಿಸಿ ವೈಜ್ಞಾನಿಕ, ವೈಚಾರಿಕ ಮತ್ತು ಪ್ರಗತಿಪರ ಚಿಂತನೆಗಳು ಆದ್ಯತೆ ಪಡೆದು ನವೋದಯ ಸಾಹಿತ್ಯದಲ್ಲಿ ಮೂಡಿ ಬಂದವು.

**ನವೋದಯ ಸಾಹಿತ್ಯದ ಪ್ರೇರಕ ಶಕ್ತಿಗಳು:**

ಯಾವುದೇ ಕಾಲಘಟ್ಟದ ಸಾಹಿತ್ಯ ಪರಂಪರೆ ಬೆಳೆದು ಬಂದುದರ ಹಿಂದೆ ಸಮಕಾಲೀನ ಸಂದರ್ಭದ ಒತ್ತಡಗಳು, ಅನೇಕ ದೃಷ್ಟಿ ಪ್ರೇರಣೆಗಳು ಮತ್ತು ಪ್ರೋತ್ಸಾಹಕ ಸಂಗತಿಗಳು ಕಾರಣವಾಗಿರುತ್ತವೆ. ಆಧುನಿಕ ಕನ್ನಡ ನವೋದಯ ಸಾಹಿತ್ಯದ ನಿರ್ಮಿತಿಯ ಹಿಂದೆ ಪ್ರೇರಕ ಶಕ್ತಿಗಳಾಗಿ ಮತ್ತು ಅದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿಸಿದ ಸಂಗತಿಗಳನ್ನು ಇಲ್ಲಿ ಗುರುತಿಸಿ ಪಟ್ಟಿಮಾಡಲಾಗಿದೆ.

**ಇಂಗ್ಲಿಷ್ ಶಿಕ್ಷಣ ಅನುಕರಣೆ:** ಭಾರತೀಯ ಸಾಂಪ್ರದಾಯಿಕ ಗುರುಕುಲ ಶಿಕ್ಷಣ ಪದ್ಧತಿಯ ಬದಲಾಗಿ ಬ್ರಿಟಿಷರು ಪರಿಚಯಿಸಿದ ಇಂಗ್ಲಿಷ್ ಶಿಕ್ಷಣದಿಂದ ಹೊಸ ಮನೋಧರ್ಮಗಳು ಭಾರತೀಯ ಸಮಾಜದಲ್ಲಿ ಹುಟ್ಟಿಕೊಂಡವು, ಇದರ ಪರಿಣಾಮವಾಗಿ ಕೆಳ ಸಮುದಾಯದವರು, ಮಹಿಳೆಯರು ಸೇರಿದಂತೆ ಸರ್ವರಿಗೂ ಮುಕ್ತ ಶಿಕ್ಷಣ ಅವಕಾಶವನ್ನು ಕಲ್ಪಿಸಿಕೊಟ್ಟರು. ಇದರ ಪರಿಣಾಮ ಜನರಲ್ಲಿ ಭಿನ್ನ

ಆಲೋಚನೆಗಳು, ಹೊಸ ಜ್ಞಾನಶಿಸ್ತುಗಳು, ವೈಚಾರಿಕತೆ ಬೆಳೆದು ಸಾಹಿತ್ಯದಲ್ಲಿ ಹೊಸ ದೃಷ್ಟಿಕೋನಗಳು ಹುಟ್ಟಿಕೊಂಡು ನವೋದಯ ಸಾಹಿತ್ಯವು ಮೂಡಿಬಂದಿತು.

**ರೊಮ್ಯಾಂಟಿಕ್ ಕಾವ್ಯದ ಪ್ರಭಾವ:** ಕನ್ನಡ ನವೋದಯ ಕಾವ್ಯದ ಮೂಲ ಪ್ರೇರಕ ಶಕ್ತಿಯೆಂದರೆ, ಇಂಗ್ಲಿಷ್‌ನ ರೊಮ್ಯಾಂಟಿಕ್ ಕಾವ್ಯ ಪರಂಪರೆಯು ನವೋದಯ ಕವಿಗಳಿಗೆ ಕವಿಮಾರ್ಗವಾಯಿತು. ವಿಲಿಯಂ ಬ್ಲೇಕ್, ಜಾನ್ ಕೀಟ್ಸ್, ಪಿ.ಬಿ. ಶೆಲ್ಲಿ, ವರ್ಡ್ಸ್‌ವರ್ತ್, ಕೋಲರಿಡ್ಜ್, ಶೇಕ್ಸ್‌ಪಿಯರ್‌ರವರ ರೊಮ್ಯಾಂಟಿಕ್ ಕಾವ್ಯ ಮತ್ತು ಕೌಶಲ್ಯಪೂರ್ಣ ಸೃಜನಶೀಲ ಮಾದರಿಗಳು ಕನ್ನಡ ಕವಿಗಳಿಗೆ ಪ್ರೇರಕವಾಗಿ, ನವೋದಯ ಸಾಹಿತ್ಯ ಬೆಳೆಯಿತು.

**ಅನುವಾದ ಸಾಹಿತ್ಯದ ಪ್ರೇರಣೆ:** ಒಂದು ವಿಷಯವನ್ನು ಇಲ್ಲವೆ ಮೂಲಪಠ್ಯವನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಧಕ್ಕೆ ಬಾರದಂತೆ ಅನುವಾದಿಸುವುದು ಇಲ್ಲವೆ ರೂಪಾಂತರ ಪ್ರಕ್ರಿಯೆಯೇ ಅನುವಾದ. ಇದರ ಪಾತ್ರ ಪ್ರಮುಖವಾದದ್ದು. ಹಳಗನ್ನಡ ಕವಿಗಳು ಸಂಸ್ಕೃತ ಮತ್ತು ಪ್ರಾಕೃತ ಪಠ್ಯಗಳನ್ನು ಕನ್ನಡಕ್ಕೆ ತಂದಂತೆ, ನವೋದಯ ಕವಿಗಳು ಇಂಗ್ಲಿಷ್, ಬಂಗಾಳಿ, ಮರಾಠಿ, ತಮಿಳು ಭಾಷೆಗಳಿಂದ ಕನ್ನಡಕ್ಕೆ ಬಗೆಬಗೆಯ ಸಾಹಿತ್ಯ ಪರಂಪರೆಗಳು ಅನುವಾದದ ಮೂಲಕ ಹರಿದುಬರುವಂತೆ ಮಾಡಿದರು. ಈ ಪರಿಣಾಮ ನವೋದಯ ಸಾಹಿತ್ಯ ಹೊಸ ಹೊಸ ಪ್ರಯೋಗಶೀಲತೆಗೆ ಪ್ರೇರಣೆ ನೀಡಿತು.

**ಮಿಷನರಿಗಳ ಕನ್ನಡ ಸೇವೆ:** ಪ್ರಯೋಗಶೀಲರಾದ ವಿದೇಶಿ ವಿದ್ವಾಂಸರು ಸೂಕ್ತ ಅಧಿಕಾರದ ಸ್ಥಾಪನೆ ಮತ್ತು ಧರ್ಮ ಪ್ರಚಾರಕ್ಕಾಗಿ ಬ್ರಿಟಿಷರು ಕನ್ನಡ ಭಾಷೆಯ ಕುರಿತ ಅಧ್ಯಯನಗಳನ್ನು ಆರಂಭಿಸಿದರು. ಮೇಲ್ನೋಟಕ್ಕೆ ಆ ಕಾರ್ಯದ ಹಿಂದೆ ವಸಾಹತುಶಾಹಿ ಪ್ರಭುತ್ವದ ಸ್ವಾರ್ಥವಿದ್ದರೂ, ಅದರಿಂದ ಕನ್ನಡ ನಾಡಿನ ಚರಿತ್ರೆಯ ಹೊಸ ಹೊಸ ಮಗ್ಗುಲುಗಳು ಶೋಧಗೊಂಡವು. ಶಾಸನ, ಹಸ್ತಪ್ರತಿಗಳ ಶೋಧ, ಗ್ರಂಥ ಸಂಪಾದನೆ, ಜನಪದ, ಪುಸ್ತಕ ಪ್ರಕಟಣೆ, ಶಾಲಾ ಪಠ್ಯಗಳ ರಚನೆ, ಶಬ್ದಕೋಶಗಳ ರಚನೆ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಇ.ಪಿ. ರೈಸ್, ಬಿ.ಎಲ್. ರೈಸ್, ಹರ್ಮನ್ ಮೊಗ್ಲಿಂಗ್, ಕರ್ನಲ್ ಮೆಕೆಂಝಿ, ಫರ್ಡಿನಾಂಡ್ ಕಿಟ್ಟೆಲ್, ಜೆ.ಎಫ್. ಫ್ಲೀಟ್ ಮುಂತಾದವರ ಕಾರ್ಯವು ಕನ್ನಡದ ಭವ್ಯ ಪರಂಪರೆಯನ್ನು ತೆರೆದಂತೆಲ್ಲ, ಸ್ಥಳೀಯ ಲೇಖಕರು ಅವರಿಂದ ಪ್ರೇರಣೆಗೊಂಡರು. ನಾಡಿನ ಪರಂಪರೆ ತಿಳಿಸಲು ಕಾರ್ಯಪ್ರವೃತ್ತರಾದರು, ಆ ಮೂಲಕ ನವೋದಯ ಸಾಹಿತ್ಯ ಬೆಳೆಯಲು ಕಾರಣರಾದರು.

**ಸಂಸ್ಕೃತ ಸಾಹಿತ್ಯದ ಪ್ರಭಾವ:** ಸಂಸ್ಕೃತ ಭಾಷೆಯ ಪರಿಚಯವುಳ್ಳ ನವೋದಯ ಲೇಖಕರು ಇಂಗ್ಲಿಷ್‌ಗಿಂತ ಸಮೃದ್ಧವಾಗಿರುವ ಸಂಸ್ಕೃತ ಸಾಹಿತ್ಯದ

ಕಡೆಗೆ ಗಮನ ಹರಿಸಿ, ಅಲ್ಲಿನ ನಾಟಕ, ಮಹಾಕಾವ್ಯ, ಗದ್ಯಕಥಾ, ನೀತಿ-ಧರ್ಮ-ಶಾಸ್ತ್ರ ಸಾಹಿತ್ಯ ಮುಂತಾದವು ನವೋದಯ ಸಾಹಿತ್ಯ ಪ್ರಕಾರಗಳಾಗಿ ಕನ್ನಡೀಕರಣಗೊಂಡವು. ಅದರರಲ್ಲಿ ಬಸವಪ್ಪ ಶಾಸ್ತ್ರಿಯವರ ನಾಟಕಗಳು, ಗುಬ್ಬಿ ಮುರುಗರಾಧ್ಯರ ಕಾದಂಬರಿಗಳು, ಕುವೆಂಪುರವರ ನಾಟಕಗಳು ಮುಖ್ಯ ರಚನೆಗಳಾಗಿವೆ. ಸಂಸ್ಕೃತ ಪಾಶ್ಚಾತ್ಯ ಸಾಹಿತ್ಯಕ್ಕೆ ಮುಖಾಮುಖಿಯಾಗಿ ನವೋದಯ ಸಾಹಿತ್ಯ ಮುನ್ನೆಲೆಗೆ ಬಂದಿತು.

**ಸ್ವಾತಂತ್ರ್ಯ ಮತ್ತು ಏಕೀಕರಣ ಹೋರಾಟದ ಪ್ರಭಾವ:** ಸ್ವಾತಂತ್ರ್ಯ ಹೋರಾಟದ ವೇಗ ದೇಶದ ತುಂಬೆಲ್ಲಾ ವ್ಯಾಪಿಸಿ ಐಕ್ಯತೆ, ಸಮಗ್ರತೆ, ಸಾಮರಸ್ಯ, ದೇಶಪ್ರೇಮ ಎಲ್ಲರಲ್ಲೂ ಮನೆಮಾಡಿತು. ಇದೇ ಸಂದರ್ಭದಲ್ಲಿ ದೇಶ ಭಾಷೆಗಳು ತಮ್ಮ ಭಾಷಿಕ ಪ್ರದೇಶಗಳ ಏಕೀಕರಣಗೊಳಿಸುವ ಹಂಬಲವು ತೀವ್ರಗೊಂಡು ನಾಡು-ನುಡಿ ಪ್ರೀತಿಸುವ, ದೇಶಾಭಿಮಾನವನ್ನು ಹೆಚ್ಚಿಸುವಂತೆ ಮಾಡಿತು. ಈ ವಿಚಾರಧಾರೆಗಳು ನವೋದಯ ಲೇಖಕರನ್ನು ಚುಂಬಕ ಶಕ್ತಿಯಂತೆ ಆಕರ್ಷಿಸಲು ಕಾರಣವಾಗಿ ನವೋದಯ ಸಾಹಿತ್ಯ ರಚನೆಗೆ ವೇದಿಕೆಯನ್ನು ಒದಗಿಸಿತು.

**ಪ್ರಾದೇಶಿಕ ಸಾಹಿತ್ಯ ಬಳಗಗಳ ಪ್ರೇರಣೆ:** ಸಮಗ್ರ ಕರ್ನಾಟಕ ನಿರ್ಮಾಣಕ್ಕಾಗಿ ಚಳವಳಿಗಳು ನಡೆಯುತ್ತಿದ್ದವು. ಅದರಲ್ಲಿ ಪ್ರಾದೇಶಿಕ ಸಾಹಿತ್ಯ ಬಳಗಗಳು ಹುಟ್ಟಿಕೊಂಡವು. ಹೊಸಬಗೆಯ ಸಾಹಿತ್ಯ ಪರಿಸರವನ್ನು ನಿರ್ಮಾಣ ಮಾಡಿದವು. ಇದರಿಂದ ಹೊಸ ಹೊಸ ಬರಹಗಾರರಿಗೆ ಪ್ರೇರಣೆಯಾಯಿತು. ಇದರಿಂದ ನವೋದಯ ಸಾಹಿತ್ಯ ಚಳವಳಿಯಾಗಿ ಬರಹಗಾರರ ಸಮೂಹ ಹೆಚ್ಚಾಗಿ ಸಾಹಿತ್ಯಕ್ಕೆ ಶಕ್ತಿಯನ್ನು ಒದಗಿಸಿತು. ನವೋದಯ ಚಳವಳಿಯ ಸಂದರ್ಭದಲ್ಲಿ ಅಖಂಡ ಕರ್ನಾಟಕ ಪರಿಕಲ್ಪನೆ ಮೂಡುವ ಮೊದಲು ಅಲ್ಲಲ್ಲಿ ಪ್ರಾದೇಶಿಕ ಸಾಹಿತ್ಯ ಬಳಗಗಳು ಹುಟ್ಟಿಕೊಂಡು ಸಾಹಿತ್ಯ ಸಂವಾದಕ್ಕೆ ವೇದಿಕೆ ಒದಗಿಸಿದವು. ಅದರಿಂದಾಗಿ ಹಲವು ಬರಹಗಾರರಿಗೆ ಪ್ರೇರಣೆ, ಮಾರ್ಗದರ್ಶನ ಒದಗಿತು. ಉತ್ತರ ಕರ್ನಾಟಕದಲ್ಲಿ ಗೆಳೆಯರ ಬಳಗ, ಕರಾವಳಿಯ ಮಂಗಳೂರು ಭಾಗದ ಲೇಖಕರ ಬಳಗ, ಹಳೆಯ ಮೈಸೂರು ಬಳಗಗಳ ಪ್ರೋತ್ಸಾಹ ಕ್ರಿಯೆಗಳಿಗೆ ಈ ಬಳಗಗಳು ಹೊಸ ಲೇಖಕರನ್ನು ರೂಪಿಸುವಲ್ಲಿ ಯಶಸ್ಸು ಕಂಡವು.

**ದೇಶೀ ಸುಧಾರಣಾವಾದಿ ಚಿಂತಕರ ಪ್ರೇರಣೆ:** ರೊಮ್ಯಾಂಟಿಕ್ ಸಾಹಿತ್ಯ ವಸಾಹತುಶಾಹಿಯಷ್ಟೇ ಹೊಸಗನ್ನಡದ ನವೋದಯ ಸಾಹಿತ್ಯಕ್ಕೆ ಸಂಪೂರ್ಣ ಪ್ರೇರಣೆಯಾಗಿರಲಿಲ್ಲ; ಅದರ ಜೊತೆಗೆ ದೇಶೀಯ ಸುಧಾರಣಾವಾದಿ ಚಿಂತಕರ ಚಿಂತನೆಗಳು ಪ್ರಮುಖ ಕಾರಣವಾಗಿವೆ. ಬ್ರಿಟಿಷ್ ವಸಾಹತುಶಾಹಿ ಕಾಲದಲ್ಲಿ ಪಶ್ಚಿಮ ಬಂಗಾಳದಲ್ಲಿ ಧಾರ್ಮಿಕ ಸುಧಾರಣಾವಾದಿ, ಸಾಮಾಜಿಕ ಸುಧಾರಣಾವಾದಿ

ಚಳವಳಿಗಳ ಪ್ರಭಾವ ಭಾರತ ತುಂಬೆಲ್ಲಾ ಆವರಿಸಿತು. ಸತಿ ಪದ್ಧತಿ, ಜಾತಿ ಪದ್ಧತಿ, ಬಾಲ್ಯ ವಿವಾಹ, ಮೂಢನಂಬಿಕೆಗಳ ವಿರುದ್ಧ; ವಿಧವಾ ವಿವಾಹ, ಸರ್ವರಿಗೆ ಶಿಕ್ಷಣ, ಸಮಾನತೆ, ವೈಚಾರಿಕ ಪರವಾದ ವಿಚಾರವಾದಗಳು ಕನ್ನಡ ಪರಿಸರದಲ್ಲಿ ಆರಂಭವಾದವು. ರಾಜಾರಾಮ್ ಮೋಹನರಾಯ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ, ದೇವೇಂದ್ರನಾಥ ಠಾಕೂರ್, ಮಹರ್ಷಿ ಅರವಿಂದ ಮುಂತಾದವರ ವಿಚಾರಧಾರೆಗಳು ಕನ್ನಡ ಕವಿಗಳನ್ನು ಪ್ರಭಾವಿಸಿ ನವೋದಯದ ಸಾಹಿತ್ಯಕ್ಕೆ ಪ್ರೇರಣೆ ನೀಡಿತು. ಕುವೆಂಪು ಅವರಿಗೆ ರಾಮಕೃಷ್ಣ ಪರಮಹಂಸ ಹಾಗೂ ವಿವೇಕಾನಂದರ ತತ್ವಾದರ್ಶಗಳ ಪ್ರಭಾವ, ಮಹರ್ಷಿ ಅರವಿಂದರ ವಿಚಾರಗಳು ದ.ರಾ. ಬೇಂದ್ರೆ, ಮಧುರಚೆನ್ನರ ಮೇಲೆ ಪ್ರೇರಣೆಯುಲಾಗಿರುವುದನ್ನು ಕಾಣುತ್ತೇವೆ.

**ಸಹೋದರ ಭಾಷಾ ಸಾಹಿತ್ಯದ ಪ್ರಭಾವ:** ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯ ಪ್ರಭಾವ ಭಾರತೀಯ ಭಾಷೆಗಳ ಮೇಲಾದಂತೆ, ಭಾರತೀಯ ಭಾಷೆಗಳ ಪ್ರಭಾವ ಕನ್ನಡದ ಮೇಲಾಗಿದೆ. ವಸಾಹತುಶಾಹಿ ಅವಧಿಯಲ್ಲಿ ಮೊದಲು ನವೋದಯ ಸಾಹಿತ್ಯ ಹುಲುಸಾಗಿ ಬೆಳೆದದ್ದು ಬಂಗಾಳಿ ಮತ್ತು ಮರಾಠಿ ಭಾಷೆಗಳಲ್ಲಿ. ತಮಿಳು, ಕನ್ನಡ, ತೆಲುಗು, ಮಲೆಯಾಳಿ ಭಾಷೆಗಳಲ್ಲಿ ತಕ್ಕಮಟ್ಟಿನ ಸಾಹಿತ್ಯ ನಿರ್ಮಾಣವಾಯಿತು. ಸಂಸ್ಕೃತ, ಬಂಗಾಳಿ, ಮರಾಠಿ, ಕನ್ನಡ ನವೋದಯ ಸಾಹಿತ್ಯದ ಮೇಲೆ ಪ್ರಭಾವ ಬೀರಿತು.

**ಸಾಹಿತ್ಯ ಪತ್ರಿಕೆಗಳ ಪ್ರಭಾವ:** ನವೋದಯ ಸಾಹಿತ್ಯದ ಮೇಲೆ ಪತ್ರಿಕೆಗಳ ಪ್ರಭಾವ ಮತ್ತು ಪ್ರೇರಣೆ ಗಾಢವಾಗಿ ಆಗಿದೆ. ಬ್ರಿಟಿಷರು ಅಧಿಕಾರದ ಪತ್ರ ವ್ಯವಹಾರ, ಮಾಹಿತಿಯ ರವಾನೆಗಾಗಿ ಪತ್ರಿಕೆಗಳನ್ನು ಹುಟ್ಟುಹಾಕಿದರು. ಅದನ್ನು ಅನುಸರಿಸಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಾರರು ಜನರನ್ನು ಎಚ್ಚರಗೊಳಿಸಲು, ಸಂಘಟಿಸಲು ರಾಷ್ಟ್ರೀಯ ಮತ್ತು ಸ್ಥಳೀಯ ಭಾಷೆಗಳಲ್ಲಿ ಪತ್ರಿಕೆಗಳನ್ನು ಆರಂಭಿಸಿದರು. ಪತ್ರಿಕೆಗಳ ವಿದ್ಯಮಾನದ ವಾಸ್ತವ ಸಂಗತಿಗಳು ಜನರನ್ನು ಜಾಗೃತಗೊಳಿಸಿದವು. ವಿಚಾರ ವಿನಿಮಯಗಳು ವಿಸ್ತಾರಗೊಂಡು ಓದುಗರ ವಲಯವನ್ನು ಹೆಚ್ಚಿಸಿದವು, ಸಮಾಜ ಮತ್ತು ಸಾಹಿತ್ಯದ ಮೇಲೆ ಹೆಚ್ಚು ಪರಿಣಾಮ ಬೀರಿದವು. ಇದು ನವೋದಯ ಸಾಹಿತ್ಯದ ಮೇಲೂ ಆಯಿತು. ಮಾಸ್ತಿಯವರ 'ಜೀವನ', ಕರ್ನಾಟಕ ವಿದ್ಯಾವರ್ಧಕ ಸಂಘದ 'ಪ್ರಬುದ್ಧ ಕರ್ನಾಟಕ' ಪತ್ರಿಕೆಗಳು ನವೋದಯ ಕಾವ್ಯ, ಕಥೆ, ಕಾದಂಬರಿ ಪ್ರಕಟಣೆ ಮತ್ತು ಪ್ರಸಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದವು.

**ಹಳಗನ್ನಡ ಸಾಹಿತ್ಯ ಪರಂಪರೆ ಪ್ರಭಾವ:** ಇಂಗ್ಲಿಷ್, ಬಂಗಾಳಿ ಸಾಹಿತ್ಯ ಕನ್ನಡ ನವೋದಯ ಲೇಖಕರ ಮೇಲೆ ಎಷ್ಟು ಪ್ರೇರಣೆಯನ್ನು ಒದಗಿಸಿವೆಯೋ, ಅದಕ್ಕಿಂತ

ಮಿಗಿಲಾದ ಪ್ರಭಾವವನ್ನು ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಮತ್ತು ಕವಿಗಳು ನವೋದಯ ಸಾಹಿತ್ಯ ಪರಂಪರೆಯ ಮೇಲೆ ಪ್ರಭಾವ ಬೀರಿದೆ.

**ಜನಪದ ಸಾಹಿತ್ಯ:** ನವೋದಯ ಕವಿಗಳಿಗೆ ಇಂಗ್ಲಿಷ್, ಬಂಗಾಳಿ, ಮರಾಠಿ, ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯದಂತೆ ಜಾನಪದ ಸಾಹಿತ್ಯವೂ ಪ್ರೇರಣೆಯನ್ನು ಒದಗಿಸಿದೆ. 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳ್ ತಳ್ವುದು', ಹಾಗೆ ಜನವಾಣಿ ಬೇರು, ಕವಿವಾಣಿ ಹೂವಾಗಿ ಪ್ರೇರಣೆ ನೀಡಿದೆ – ಬೇಂದ್ರೆ ಕಾವ್ಯವು 'ಜನಪದದ ಶಿಷ್ಟರೂಪದ ಅಭಿವ್ಯಕ್ತಿ'ಯಂತಿದೆ. ನವೋದಯ ಕವಿಗಳು ತ್ರಿಪದಿ, ಲಾವಣಿಗಳ ಪ್ರಯೋಗಗಳು, ಅವರ ಕಥನ ಕವನ ರೂಪಗಳಾಗಿ ರಚನೆಗೊಂಡವು. ಬೆಟಗೇರಿ ಕೃಷ್ಣಶರ್ಮರವರ 'ಮಾತನಾಡುವ ಕಲ್ಲು', ಗೊರೂರು ರಾಮಸ್ವಾಮಿಯವರ 'ನಮ್ಮೂರಿನ ರಸಿಕರು' ಜನಪದ ಸೊಗಡಿನ ರಚನೆಗಳಾಗಿರುವುದನ್ನು ಉದಾಹರಿಸಬಹುದು.

**ಮುದ್ರಣಯಂತ್ರ ಮತ್ತು ಸಾರಿಗೆ ಸೇವೆ:** ಕೈಬರಹದ ಮೂಲಕ ಓದುಗ ವಲಯವನ್ನು ತಲುಪುತ್ತಿದ್ದ ಸುದ್ದಿ, ಸಾಹಿತ್ಯ, ಕಾವ್ಯ, ಮುದ್ರಣ ಯಂತ್ರ ಮತ್ತು ಕಾಗದ ಬಳಕೆಯಿಂದ ಬರವಣಿಗೆಗೆ ಯಂತ್ರದ ಸ್ಪರ್ಶ ಒದಗಿತು. ದೇಶದಲ್ಲಿ ವಿವಿಧ ಕಡೆಗಿದ್ದ ಮುದ್ರಣ ಯಂತ್ರಗಳ ಸಹಾಯದಿಂದ ನವೋದಯ ಕವಿಗಳ ಸಾಹಿತ್ಯ ಬರಹಗಳು ಪ್ರಕಟವಾದವು. ನಾಡಿನ ಬೇರೆ ಬೇರೆ ಭಾಗದ ಓದುಗರಿಗೆ ರೈಲು ಸಾರಿಗೆ, ರಸ್ತೆ ಸಾರಿಗೆಯ ಮುಖಾಂತರ ವೇಗವಾಗಿ ತಲುಪಿ ಸಾಹಿತ್ಯಕ್ಕೆ ಇನ್ನಷ್ಟು ಶಕ್ತಿ ಹಾಗೂ ಪ್ರೇರಣೆ ನೀಡಿತು.

**ಮೈಸೂರು ಒಡೆಯರ ಪ್ರೋತ್ಸಾಹ:** ರಾಜಾಶ್ರಯದ ಪ್ರೇರಣೆ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಒದಗಿದಂತೆ ಆಧುನಿಕ ಕನ್ನಡದ ನವೋದಯ ಸಾಹಿತ್ಯಕ್ಕೂ ಕೂಡ ಒಂದು ಪ್ರಮಾಣದಲ್ಲಿ ಮೈಸೂರು ಅರಸರ ಪ್ರೋತ್ಸಾಹದಿಂದ ಬೆಳೆಯಲು ಕಾರಣವಾಯಿತು. ಹಾಗೆಯೇ ಅನೇಕ ಕವಿಗಳ ಬೆಳವಣಿಗೆಗೆ, ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ಮಾಣದಲ್ಲೂ ಒಡೆಯರ ಪ್ರೋತ್ಸಾಹ ದೊರೆಯಿತು.[7]

ಹೀಗೆ ನವೋದಯ ಸಾಹಿತ್ಯ ಪರಂಪರೆ ಬೆಳೆಯಲು ಬೇರೆ ಬೇರೆ ಪ್ರೇರಣೆ, ಧೋರಣೆ, ಪ್ರಭಾವಗಳು ಕಾರಣವಾಗಿರುವುದು ನಿಜ. ಆದರೆ ಇವಷ್ಟೇ ಸಂಗತಿಗಳು ಅಂತಿಮವಲ್ಲ. ಇಂಥ ಅಂಶಗಳನ್ನು ಅದೆಷ್ಟು ಕವಿಗಳು ತಮ್ಮದಾಗಿಸಿಕೊಂಡಿದ್ದಾರೆ? ಒಂದು ಸಾಹಿತ್ಯ ಚಳವಳಿಯ ಕಾಲಘಟ್ಟದಲ್ಲಿ ಕಾಣಿಸಿಕೊಳ್ಳುವ ಲೇಖಕರಿಗೆಲ್ಲಾ ಕೆಲವು ವಿಷಯಗಳು ಪ್ರೇರಣೆ ಮಾತ್ರವೆಂದು ಹೇಳಲಾಗದು. ಅದರಾಚೆ ಹಲವು ಸಾಮಾಜಿಕ ಒತ್ತಡಗಳಿಂದ ಸಾಹಿತ್ಯ ಚಳವಳಿಗಳು ರೂಪಗೊಳ್ಳುತ್ತವೆ. ಈ ಸಂಗತಿಗಳ ಜೊತೆಗೆ ಲೇಖಕರೂ ಕೂಡ ಸ್ವಪ್ರೇರಣೆ, ಸ್ಫೂರ್ತಿ, ಪ್ರತಿಭೆ, ಪ್ರಭಾವ, ನಾಡಸೇವೆ, ಸಾಹಿತ್ಯ

ಸೇವೆಗಳೆಲ್ಲ ಮೈಗೂಡಿಸಿಕೊಂಡು, ಜೀವನ ಶ್ರದ್ಧೆಯ ಆಶಯವುಳ್ಳ ನವೋದಯದ ಲೇಖಕರು ತಮ್ಮ ಬದುಕಿನ ಕಾಲಘಟ್ಟದಲ್ಲಿ ಒದಗಿದ ಪ್ರೇರಣೆಗಳೆಲ್ಲ ಶಕ್ತಿಯಾಗಿಸಿಕೊಂಡು ನವೋದಯ ಸಾಹಿತ್ಯ ಪರಂಪರೆಗೆ ಶಕ್ತಿ ತುಂಬಿರುವರು.

**ಕೊನೆ ಟಿಪ್ಪಣಿಗಳು:**

1. ಶ್ರೀಕಂಠಯ್ಯ ತೀ.ನಂ., (2005), ಭಾರತೀಯ ಕಾವ್ಯಮೀಮಾಂಸೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.ಸಂ. 118
2. ಶಿವಾರೆಡ್ಡಿ ಕೆ. (ಸಂ, (2021), ಕುವೆಂಪು ಸಮಗ್ರ ಗದ್ಯ: ಸಂಪುಟ–8, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 96
3. ಲಕ್ಷ್ಮೀಕಾಂತ ಪಂಚಾಳ (ಸಂ), (2022), ನವೋದಯ ಸಾಹಿತ್ಯ ರೂಪಗಳು, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, ಪು.ಸಂ. 34–35
4. ಅದೇ, ಪು.ಸಂ. 44–45
5. ತಿಪ್ಪೇರುದ್ರ ಸಂಡೂರು (ಸಂ), (2022), ನವೋದಯ ಸಾಹಿತ್ಯ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, ಪು.ಸಂ. 90
6. ಲಕ್ಷ್ಮೀಕಾಂತ ಪಂಚಾಳ (ಸಂ), (2022), ನವೋದಯ ಸಾಹಿತ್ಯ ರೂಪಗಳು, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, ಪು.ಸಂ. 39–40.
7. ತಿಪ್ಪೇರುದ್ರ ಸಂಡೂರು (ಸಂ), (2022), ನವೋದಯ ಸಾಹಿತ್ಯ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, ಪು.ಸಂ. 50–54

## ಪರಾಮರ್ಶನ ಗ್ರಂಥಗಳು:

1. ಶ್ರೀಕಂಠಯ್ಯ ಬಿ.ಎಂ., (1985), ಕನ್ನಡ ಮಾತು ತಲೆಯತ್ತುವ ಬಗೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.
2. ಶಿವರುದ್ರಪ್ಪ ಜಿ.ಎಸ್., (2019), ಸಮಗ್ರ ಗದ್ಯ ಸಂಪುಟಗಳು, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ಶ್ರೀನಿವಾಸ ಹಾವನೂರು, (2011), ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಶೇಷಗಿರಿರಾವ್ ಎಲ್.ಎಸ್., (2008), ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು.
5. ಅಮೂರ ಜಿ.ಎಸ್., (2013), ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಸಪ್ನ ಬುಕ್ ಹೌಸ್, ಬೆಂಗಳೂರು.
6. ನಾಯಕ ಹಾ.ಮಾ. (ಪ್ರ.ಸಂ.), (1984), ವಿಮರ್ಶೆಯ ಮಾರ್ಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸುರು.
7. ಶ್ರೀಕಂಠಯ್ಯ ತೀ.ನಂ., (2005), ಭಾರತೀಯ ಕಾವ್ಯಮೀಮಾಂಸೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಶಿವಾರೆಡ್ಡಿ ಕೆ. (ಸಂ, (2021), ಕುವೆಂಪು ಸಮಗ್ರ ಗದ್ಯ: ಸಂಪುಟ–8, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಲಕ್ಷ್ಮೀಕಾಂತ ಪಂಚಾಳ (ಸಂ), (2022), ನವೋದಯ ಸಾಹಿತ್ಯ ರೂಪಗಳು, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ
10. ತಿಪ್ಪೇರುದ್ರ ಸಂಡೂರು (ಸಂ), (2022), ನವೋದಯ ಸಾಹಿತ್ಯ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.